# 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ
# ಚಿಕ್ಕೋಡಿ

CC No.:-4177/2023

C.W.:-2

P.W.:-2

| | |
|---|---|
| ಸಾಕ್ಷಿದಾರನ ಹೆಸರು | ದತ್ತಾತ್ರೇಯ ಪಾಟೀಲ |
| ತಂದೆಯ ಹೆಸರು | ಮಲ್ಲಪ್ಪ |
| ವಯಸ್ಸು | 53 ವರ್ಷ |
| ಕೆಲಸ | ಒಕ್ಕಲುತನ |
| ವಾಸ | ನನದಿವಾಡಿ |

ಸಾಕ್ಷಿಗೆ ಈ ದಿನ ದಿಃ 09-04-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭೀಯೋಜಕರಿಂದಃ**

ಚಾಸಾ 3 ನನಗೆ ಪರಿಚಯ.

ಸಾಕ್ಷಿಯು ಪಂಚನಾಮೆಯ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 3 ಎಂದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 3ಎ ಎಂದು ಗುರುತಿಸಲಾಯಿತು. ದಿಃ21.03.2023 ರಂದು ನಿ ಪಿ 3 ರ ಮೇಲೆ ಸಹಿ ಮಾಡಿರುತ್ತೇನೆ. ಆ ದಿನ ಘಟನಾ ಸ್ಥಳದ ಹತ್ತಿರ ನಾನು ಮತ್ತು ಚಾಸಾ 3 ರವರು ನಿಂತಿದ್ದಾಗ ಪೊಲೀಸರು ಹೊಡಿ ಬಡಿ ಆಗಿರುತ್ತದೆ ಅದಕ್ಕೆ ಪಂಚನಾಮೆ ಮಾಡುವುದು ಇದೆ ನನಗೆ ಹಾಗೂ ಚಾಸಾ 3 ರವರಿಗೆ ಬರಲು ಹೇಳಿದರು. ಚಾಸಾ 1 ರವರು ಹೊಡೆದಾಟ ಆಗಿರುವ ಸ್ಥಳವನ್ನು ತೋರಿಸಿದರು. ಅದನ್ನು ಪೊಲೀಸರು ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಪಂಚನಾಮೆ ಮಾಡಿದರು. ಸದರಿ ಪಂಚನಾಮೆಯು ಬೆಳಗ್ಗೆ 10.00 ರಿಂದ 11.00 ಗಂಟೆ ವರೆಗೆ ಮಾಡಿರುತ್ತಾರೆ. ಪಂಚನಾಮೆ ಕಾಲಕ್ಕೆ ಒಂದು ಛಾಯಾ ಚಿತ್ರವನ್ನು ತೆಗೆದಿರುತ್ತಾರೆ. ಸಾಕ್ಷಿಯು ಸದರಿ ಛಾಯಾ ಚಿತ್ರದಲ್ಲಿ ತಾವು ಇರುವುದನ್ನು ನೋಡಿ

ಗುರುತಿಸಿದ್ದು, ಆ ಛಾಯಾ ಚಿತ್ರವನ್ನು ಈಗಾಗಲೇ ನಿಪಿ2 ಎಂದು ಗುರುತಿಸಲಾಗಿದೆ. ಪಂಚನಾಮೆ ಮಾಡಿದ ಸ್ಥಳವು ವಡ್ಡರ ಮನೆಯ ಹತ್ತಿರ ಆಗಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎಸ್ ಡಿ ವಕೀಲರಿಂದಃ**

ನಾನು 10 ನೇ ತರಗತಿಯ ವರೆಗೆ ಓದಿರುತ್ತೇನೆ. ಚಾಸಾ 1 ಮತ್ತು ನನ್ನ ಸಂಬಂಧ ಚನ್ನಾಗಿ ಇರುತ್ತದೆ. ನನಗೆ ಮತ್ತು ಪೊಲೀಸರ ಜೊತೆ ಯಾವುದೆ ವಹಿವಾಟು ಇರುವುದಿಲ್ಲ. ಚಾಸಾ 1 ಪಂಚನಾಮೆ ಮಾಡುವುದು ಇದೆ ಎಂದು ನಮಗೆ ಕರೆದಿರುವುದಿಲ್ಲ. ಘಟನಾ ಸ್ಥಳವು ರಸ್ತೆ ಆಗಿರುತ್ತದೆ. ಪೂರ್ವಕ್ಕೆ ವಡ್ಡರ ಮನೆ, ಪಶ್ಚಿಮಕ್ಕೆ ಜಮೀನು, ಉತ್ತರ ದಕ್ಷಿಣಕ್ಕೆ ರಸ್ತೆ ಇರುತ್ತದೆ. ನಿಪಿ3 ಪಂಚನಾಮೆಯನ್ನು ಬರೆಯಲು ನಾನು ಮಾಹಿತಿ ನೀಡಿರುವುದಿಲ್ಲ. ನಾನು ಈ ಮೇಲೆ ಹೇಳಿದ ಚಕಬಂದಿಯು ನಿಪಿ3 ರಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಪಿ2 ಛಾಯಾ ಚಿತ್ರದಲ್ಲಿ ಯಾವುದೇ ಕಂಬ ಕಾಣುತ್ತಿಲ್ಲ ಎಂದರೆ ಸರಿ. ನಿಪಿ3 ಪೊಲೀಸರು ಬರೆದಿರುತ್ತಾರೆ ಅವರ ಹೆಸರು ಹೇಳಲು ಆಗುವುದಿಲ್ಲ. ಪೊಲೀಸರು ಆ ಸ್ಥಳದಲ್ಲಿ ನಿಲ್ಲಲು ಹೇಳಿದ್ದರಿಂದ ನಾನು ನಿಂತಿರುತ್ತೇನೆ ಅದರಂತೆ ನಿಪಿ2 ರಂತೆ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿ. ಚಾಸಾ 1 ರವರ ಜೊತೆ ಪೊಲೀಸ ಠಾಣೆಗೆ ಹೋಗಿದ್ದಾಗ ನಿಪಿ3 ರ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ಮತ್ತು ನನ್ನ ಜಮೀನು ಹೊಂದಿಕೊಂಡು ಇರುತ್ತೇವೆ ಎಂದರೆ ಸರಿಯಲ್ಲ. ನನ್ನ ಹಾಗೂ ಚಾಸಾ 1 ರವರ ಹಣಕಾಸಿನ ವ್ಯವಹಾರ ಇರುತ್ತೇವೆ ಎಂದರೆ ಸರಿಯಲ್ಲ. ಪೊಲೀಸರು ಆ ಸ್ಥಳದಲ್ಲಿ ಬೆಳಗ್ಗೆ 10.00 ರಿಂದ 11.00 ಗಂಟೆ ವರೆಗೆ ಇದ್ದರು ಆ ಸಮಯದಲ್ಲಿ ಪೊಲೀಸರು ನಮ್ಮ ಸಮಕ್ಷಮ ಯಾವುದೇ ಹಾತ ನಕಾಶೆಯನ್ನು ತೆಗೆದಿರುವುದಿಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ